# ಪಿಂಕಿಯ ನೆಪದಲ್ಲಿ...



ಪೃಥ್ವಿ ಕೊಣನೂರು ನಿರ್ದೇಶನದ ಮೂರನೇ ಸಿನಿಮಾ 'ಪಿಂಕಿ ಎಲ್ಲಿ?' ಗೋವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಇಂಡಿಯನ್ ಪನೋರಮಾ ವಿಭಾಗಕ್ಕೆ ಆಯ್ಕೆಯಾಗಿದೆ. ಬೂಸಾನ್ ಚಿತ್ರೋತ್ಸವದಲ್ಲಿಯೂ ಪ್ರದರ್ಶನ ಕಂಡಿರುವ ಈ ಸಿನಿಮಾ ಜಾಗತಿಕ ಪರ್ಯಟನೆಗೆ ಸಜ್ಜಾಗಿದೆ. ಈ ಖುಷಿಯ ಜೊತೆಗೆ ಕನ್ನಡ ಚಿತ್ರರಂಗದ ಕೆಲವು ಕಹಿಸತ್ಯಗಳನ್ನೂ ಇಲ್ಲಿ ಹಂಚಿಕೊಂಡಿದ್ದಾರೆ ಪೃಥ್ವಿ.

■ ಪದ್ಮನಾಭ ಭಟ್

ಪೃಥ್ವಿ ಕೊಣನೂರು ಎಂಬ ಹೆಸರು ಕನ್ನಡ ಚಿತ್ರರಂಗದಲ್ಲಿಯೇ ತುಂಬ ಜನರಿಗೆ ಅಪರಿಚಿತ. 2017ರಲ್ಲಿ 'ರೈಲ್ವೆ ಚಿಲ್ಡ್ರನ್' ಸಿನಿಮಾಗೆ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಮನ್ನಣೆ ಸಿಕ್ಕಾಗ ಈ ಹೆಸರು ಕೆಲವರ ಬಾಯಿಯಲ್ಲಿ ಓಡಾಡಿ ಕೆಲವೇ ದಿನಗಳಲ್ಲಿ ಮರೆಯಾಗಿತ್ತು. ಈಗ ಮತ್ತದೇ ಹೆಸರು ಓಡಾಡುತ್ತಿದೆ. ಅದಕ್ಕೆ ಕಾರಣ 'ಪಿಂಕಿ ಎಲ್ಲಿ?'. ಇದು ಪೃಥ್ವಿ ಅವರ ನಿರ್ದೇಶನದ ಹೊಸ ಸಿನಿಮಾ.

'ರೈಲ್ವೆ ಚಿಲ್ಡ್ರನ್' ಸಿನಿಮಾದಲ್ಲಿ ಹಳ್ಳಿಗಳಿಂದ ನಗರಕ್ಕೆ ಓಡಿಬಂದು ಬದುಕನ್ನು ಸಾಗಿಸುವ ಮಕ್ಕಳ ದಾರುಣ ಬದುಕನ್ನು ಬೆಚ್ಚಿಬೀಳಿಸುವ ಹಾಗೆ ಚಿತ್ರಿಸಿದ್ದ ಪೃಥ್ವಿ, ಈಗ ಮತ್ತೊಂದು ಕಾಡುವ ಕಥನದೊಂದಿಗೆ ಬಂದಿದ್ದಾರೆ. ಈ ಸಲವೂ ಅವರ ಸಿನಿಮಾದ ಕೇಂದ್ರ ಮಕ್ಕಳೇ. 'ಪಿಂಕಿ ಎಲ್ಲಿ?' ಎಂಬ ಹೆಸರೇ ಇದೊಂದು ಮಗುವಿನ ಕಥೆ ಎಂಬುದನ್ನು ಸೂಚಿಸುವ ಹಾಗಿದೆ. ಆದರೆ ಒಂದು ಮಗುವಿನ ಕಥೆಯ ಮೂಲಕ ನಮ್ಮ ನಾಗರಿಕ ಸಮಾಜದ ಒಳಗೇ ಬಚ್ಚಿಟ್ಟುಕೊಂಡಿರುವ ಪಾತಕಜಗತ್ತೊಂದನ್ನು ತೆರೆದಿಟ್ಟಿದ್ದಾರೆ ಅವರು.



ಮುಗ್ಧ ಮಕ್ಕಳನ್ನು ಭಿಕ್ಷೆ ಎತ್ತಲು ಬಾಡಿಗೆ ಕೊಡುವ ಕ್ರೌರ್ಯಜಾಲವೊಂದರ ಸುತ್ತ ಈ ಸಿನಿಮಾ ಹೆಣೆಯಲಾಗಿದೆಯಂತೆ.

'ಮಕ್ಕಳನ್ನು ನೋಡಿಕೊಳ್ಳಲಿಕ್ಕೆಂದು ಬರುವವರು, ಆ ಮಕ್ಕಳನ್ನು ಭಿಕ್ಷೆ ಎತ್ತಲು ಬಾಡಿಗೆ ಕೊಡುವ ಘಟನೆಯ ಸುತ್ತ ಈ ಸಿನಿಮಾ ಹೆಣೆಯಲಾಗಿದೆ. ಇದು ಪೂರ್ತಿ ಕಾಲ್ಪನಿಕವೇನಲ್ಲ. ಹಿಂದೆ ಇಂಥ ಎರಡು ಪ್ರಕರಣಗಳು ಬೆಳಕಿಗೆ ಬಂದಿದ್ದವು. ತುಂಬ ಹಿಂದೆಯೇ ನನ್ನ ಮನಸ್ಸಿನಲ್ಲಿ ಈ ವಸ್ತು ಇತ್ತು. ಅದು ಬೆಳೆದು ಚಿತ್ರಕಥೆಯಾಗಲು ಸಾಕಷ್ಟು ಸಮಯ ತಗುಲಿತು' ಎಂದು ಈ ಸಿನಿಮಾ ವಸ್ತು ಹೊಳೆದಿದ್ದರ ಕುರಿತು ಅವರು ವಿವರಿಸುತ್ತಾರೆ.

2019ರಲ್ಲಿಯೇ, 'ಪಿಂಕಿ ಎಲ್ಲಿ?' ಸಿನಿಮಾ ಚಿತ್ರೀಕರಣ ಮುಗಿದಿತ್ತು. ಅದೇ ವರ್ಷ ಗೋವಾ ಫಿಲಂ ಬಜಾರ್‌ನಲ್ಲಿ ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿತು. ಚಿತ್ರೀಕರಣ ಹಂತದಲ್ಲಿರುವ ಸಿನಿಮಾಗೆ ಕೊಡಲಾಗುವ ಪ್ರಶಸ್ತಿಗಳವು. ಅಲ್ಲಿಯೇ ಪಿಕ್ಚರ್ಸ್ ಇಂಟರ್‌ನ್ಯಾಷನಲ್ ಎಂಬ ಸಿನಿಮಾ ಏಜನ್ಸಿಯು ಅಂತರರಾಷ್ಟ್ರೀಯ ಚಿತ್ರೋತ್ಸವಗಳ ಹಂಚಿಕೆಯ ಹಕ್ಕುಗಳನ್ನು ಖರೀದಿಸಿತು.

ಈಗಾಗಲೇ 'ಪಿಂಕಿ..' ಬೂಸಾನ್ ಇಂಟರ್‌ನ್ಯಾಷನಲ್ ಫಿಲಂ ಫೆಸ್ಟಿವಲ್ ಮತ್ತು ಚೀನಾದ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡಿದೆ. ಕೇರಳ ಚಿತ್ರೋತ್ಸಕ್ಕೂ ಆಯ್ಕೆಯಾಗಿದೆ. ಗೋವಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಚಿತ್ರೋತ್ಸವದ ಇಂಡಿಯನ್ ಪನೋರಮಾ ವಿಭಾಗಕ್ಕೂ ಆಯ್ಕೆಯಾಗಿದೆ. ಮುಂದಿನ ವರ್ಷ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ನಡೆಯಲಿರುವ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿಗಳನ್ನೂ ಬಾಚಿಕೊಳ್ಳುವ ನಿರೀಕ್ಷೆ ಇದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದ ಎರಡು ಸಿನಿಮಾಗಳನ್ನು ಕೊಟ್ಟರೂ ಪೃಥ್ವಿ ಕನ್ನಡ ಚಿತ್ರರಂಗದಲ್ಲಿ ಅಪರಿಚಿತರೇ ಆಗಿದ್ದಾರೆ. ಇದಕ್ಕೆ ಕಾರಣವೇನು ಎಂದು ಕೇಳಿದರೆ, 'ನನಗೂ ಗೊತ್ತಿಲ್ಲ. ಈ ಪ್ರಶ್ನೆಯನ್ನು ನೀವು ಚಿತ್ರರಂಗದವರಿಗೇ ಕೇಳಬೇಕು' ಎಂದು ತುಸು ವಿಷಾದದಿಂದಲೇ